**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಉಡುಪಿ.**

**ಸಿ.ಸಿ.ಃ 6/2018**

ಪಿ.ಡಬ್ಲೂ:5, **ಸಿ.ಡಬ್ಲ್ಯೂಃ 2**

**ಸಾಕ್ಷಿದಾರರ ಹೆಸರು** ಃ ಶ್ರೀಪತಿ ಎಸ್ ನಾಯಕ್

**ತಂದೆಯ ಹೆಸರು** ಃ ಸುಬ್ರಾಯ ನಾಯಕ್

**ವಯಸ್ಸು** ಃ **45 ವರ್ಷ**

**ಉದ್ಯೋಗ** ಃ ಖಾಸಗಿ ಉದ್ಯೋಗ

**ವಾಸಸ್ಥಳ** ಃ ಅಲೆವೂರು, ಉಡುಪಿ

**ದಿಃ 22.07.2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾ** ಯಿತು.

ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸರಕಾರಿ ಸಹಾಯಕ ಅಭಿಯೋಜಕರಿಂದಃ

ಸಾಕ್ಷಿಯು ನಿ.ಪಿ-5 ದಾಖಲೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-5(ಬಿ) ಎಂದು ಗುರುತಿಸಿದೆ. ಸುಮಾರು 6 ವರ್ಷಗಳ ಹಿಂದೆ ಚಾ.ಸಾ-1 ರವರ ಮನೆಯಲ್ಲಿ ಕಳ್ಳತನ ಆದ ಬಗ್ಗೆ ತನಿಖೆ ಮಾಡಲು ಪೋಲೀಸರು ಬಂದಿದ್ದು ಆ ಸಮಯದಲ್ಲಿ ಪೋಲೀಸರು ತನಿಖೆ ಮಾಡಿದ ನಂತರ ಆ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಚಾ.ಸಾ-1 ರವರ ಮನೆಯ ಒಳಗೆ ನಾನು ಹೋದಾಗ ಅವರ ಮನೆಯ ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದವು. ಆ ಸಮಯದಲ್ಲಿ ಚಾ.ಸಾ-1 ರವರ ಮನೆಯಲ್ಲಿ ಇದ್ದ ಮೊಬೈಲ್, ಇಸ್ತ್ರಿ ಪೆಟ್ಟಿಗೆ, ಕ್ಯಾಮರಾ ಕಾಣುತ್ತಿಲ್ಲ ಎಂದು ತಿಳಿಸಿರುತ್ತಾರೆ. ನಿ.ಪಿ-5 ಕ್ಕೆ ನಾನು ಸಹಿ ಮಾಡುವಾಗ ನನ್ನೊಂದಿಗೆ ಚಾ.ಸಾ-3 ರವರು ಸಹಾ ಹಾಜರಿದ್ದರು.

ಸಾಕ್ಷ್ಯವನ್ನು 299 ಸಿಆರ್ ಪಿಸಿ ಯಡಿಯಲ್ಲಿ ದಾಖಲು ಮಾಡಲಾಗಿದೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾ** ಯಿತು)

**ಓ ಹೇ ಕೇ ಸ ಇದೆ ಎಂದು ಒಪ್ಪಿದರು**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎ.ಸಿ.ಜೆ.ಎಮ್, ಉಡುಪಿ.